<u>ದಿನಾಂಕಃ 23.03.2026 ರಂದು ಸಾಕ್ಷಿಗೆ ಪುನಃ ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಂದುವರಿದ ಪಾಟೀಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ-</u>

ನನ್ನ ತಾಯಿ 2014 ರಲ್ಲಿ ಮರಣ ಹೊಂದಿದ್ದು ಅವರು ಮರಣ ಹೊಂದಿದ ನಂತರದಿಂದ ನಾನು ಮತ್ತು ವಾದಿ ಕಣ್ಣು ಅಳತೆಯ ಮೇಲೆ ಬೇರೆ ಬೇರೆಯಾಗಿ ಅಂದರೆ ಪ್ರತ್ಯೇಕವಾಗಿ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದೇವೆ. ಮನೆ ಮತ್ತು ಹಿತ್ತಲನ್ನು ಹೊರತು ಪಡಿಸಿ ಒಟ್ಟು 7 ಜಮೀನುಗಳು ಇವೆ ಎಂದರೆ ಸರಿ. ದಾವಾದ ಎಲ್ಲಾ ಜಮೀನುಗಳಲ್ಲಿ ಅಡಿಕೆ ತೋಟಗಳು ಇವೆ ಎಂದರೆ ಸರಿಯಲ್ಲ, ಕೆಲವು ಜಮೀನಿನಲ್ಲಿ ತೋಟ ಇದೆ ಮತ್ತು ಕೆಲವು ಜಮೀನುಗಳಲ್ಲಿ ಇಲ್ಲ. ಮೂರು ಜಮೀನುಗಳಲ್ಲಿ ಮಾತ್ರ ಅಡಿಕೆ ತೋಟ ಇವೆ. ಅವುಗಳ ಒಟ್ಟು ವಿಸ್ತೀರ್ಣ ಸುಮಾರು 6 ಎಕರೆ ಆಗುತ್ತದೆ. ನನ್ನ ತಾಯಿ ಮೃತಪಟ್ಟ ನಂತರದಲ್ಲಿ ಒಟ್ಟಿಗೆ ತೋಟವನ್ನು ಮಾಡಿದ್ದೇವೆ. ನನಗಿಂತ 4-5 ಎಕರೆ ಜಾಸ್ತಿ ಜಮೀನಿನಲ್ಲಿ 1 ನೇ ಪ್ರತಿವಾದಿ ತೋಟ ಮಾಡುತ್ತಿದ್ದಾನೆ. ನಾನು 1 ½ ಯಿಂದ 2 ಎಕರೆ ಜಮೀನಿನಲ್ಲಿ ಮಾತ್ರ ತೋಟ ಮಾಡಿ ಸ್ವಾಧೀನ ಹೊಂದಿದ್ದೇನೆ. ನನ್ನ ತಾಯಿ ಜೀವಂತ ಇದ್ದಾಗಲೇ ಮನೆಯಲ್ಲಿ ಹೆಣ್ಣು ಮಕ್ಕಳಿಗೆ ಸರಿಬಾರದ ಕಾರಣ ಪ್ರತ್ಯೇಕ ಸಂಸಾರ ಹೂಡಿದ್ದೇವೆ ಎಂದರೆ ಸರಿ. ನಮ್ಮ ತಾಯಿ ಹೇಳಿದ ಪ್ರಕಾರ ಇಂತಿಷ್ಟು ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು ಅದರ ಲಾಭವನ್ನು ಪ್ರತ್ಯೇಕವಾಗಿ ನಾವೇ ಉಪಯೋಗಿಸುತ್ತಿದ್ದೇವೆ ಎಂದರೆ ಸರಿ.

2. 1 ನೇ ಪ್ರತಿವಾದಿ ಮತ್ತು ನಾನು ಒಂದೇ ನಿವೇಶನದಲ್ಲಿ ಆರ್.ಸಿ.ಸಿ ಮನೆಯನ್ನು ಮತ್ತು ಒಂದು ಹೆಂಚಿನ ಮನೆ ಕಟ್ಟಿದ್ದೇವೆ, ಆರ್.ಸಿ.ಸಿ ಮನೆಯನ್ನು 1 ನೇ ಪ್ರತಿವಾದಿ ಕಟ್ಟಿಸಿದ್ದಾರೆ ಮತ್ತು ಹೆಂಚಿನ ಮನೆಯನ್ನು ನಾನು ಕಟ್ಟಿಸಿದ್ದೇನೆ. ನಾವು ಬೇರೆ ಹೋದ ನಂತರ ನನಗೆ ಪಡಿತರ ಚೀಟಿ ಬೇರೆ ಮಾಡಿಸಿಕೊಂಡಿದ್ದೇನೆ. ನಮ್ಮ ಮನೆಗೆ ಸಂಬಂಧಪಟ್ಟಂತೆ ಪ್ರತ್ಯೇಕವಾದ ಆಧಾರ್ ಕಾರ್ಡ್ ಮತ್ತು ಓಟರ್ ಲೀಸ್ಟ್ ಆಗಿದೆ ಎಂದರೆ ಸರಿ. 1 ನೇ ಪ್ರತಿವಾದಿಯ ಮನೆ 30-40 ಲಕ್ಷ ಬೆಲೆ ಬಾಳುವ ಮನೆ ಎಂದರೆ ಇರಬಹುದು. ಸದರಿ ಮನೆಯನ್ನು 2017-18 ರಲ್ಲಿ ಕಟ್ಟಿರಬಹುದು. ನಾನು ನನ್ನ ಮನೆಯನ್ನು ಕಟ್ಟಿಸಿ 12 ವರ್ಷ ಆಗಿದೆ. ನನಗೆ ಮನೆ ಕಟ್ಟಿಸಲು 8 ಲಕ್ಷ ಖರ್ಚು ಆಗಿರಬಹುದು. ನಾನು ಮೊದಲು ಮನೆ ಕಟ್ಟಿದ್ದೇನೆ ನಂತರದಲ್ಲಿ 1 ನೇ ಪ್ರತಿವಾದಿ ಕಟ್ಟಿದ್ದಾನೆ. ನಾನು ಮನೆ ಕಟ್ಟಲು 1 ನೇ ಪ್ರತಿವಾದಿ ತಕರಾರು ಮಾಡಿಲ್ಲ ಮತ್ತು ಆತನು ಮನೆ ಕಟ್ಟಬೇಕಾದರೆ ನಾನು ತಕರಾರು ಮಾಡಿಲ್ಲ ಎಂದರೆ ಸರಿ. ನಮ್ಮಗಳಿಗೆ ಕೃಷಿ ಆದಾಯವನ್ನು ಹೊರತುಪಡಿಸಿ ಬೇರೆ ಆದಾಯ ಇಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಬೇರೆಯವರ ತೋಟದಿಂದ ಅಡಿಕೆ ಚೇಣಿ ಮಾಡಿಸುವ ವ್ಯವಹಾಯ ಕೂಡ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಮರಣ ಹೊಂದುವ ಪೂರ್ವದಿಂದಲೂ ನಾನು ಮತ್ತು 1 ನೇ

ಪ್ರತಿವಾದಿ ಎಲ್ಲಾ ಜಮೀನುಗಳಲ್ಲಿ ಖಾಸಗಿ ಸರ್ವೇಯರ್ ಮುಖಾಂತರ ಹಿಸ್ಸೆ ಮಾಡಿಸಿ ಬೇರೆ ಬೇರೆ ಸ್ವಾಧೀನ ಹೊಂದಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ಹಾಕುವ ತನಕ ನಾನು ಮತ್ತು 1 ನೇ ಪ್ರತಿವಾದಿ ಚೆನ್ನಾಗಿದ್ದೆವು ಎಂದರೆ ಸರಿ, ಸಾಕ್ಷಿಯು ಮುಂದುವರಿದು ಭಾಗ ಕೇಳಿದಾಗಿನಿಂದ ವೈಮನಸ್ಸು ಆರಂಭ ಆಗಿದೆ ಎನ್ನುತ್ತಾರೆ.

3. ನನಗೆ ಮಕ್ಕಳು ಇರುವುದಿಲ್ಲ. ನನ್ನ ಮದುವೆಯಾಗಿ 20 ವರ್ಷ ಆಗಿದೆ. ನನ್ನ ಅಣ್ಣನಿಗೆ ಅಂದರೆ 1 ನೇ ಪ್ರತಿವಾದಿಗೆ ಒಬ್ಬ ಮಗ ಮತ್ತು ಮಗಳು ಇದ್ದಾರೆ. ಮಗ ಪ್ರಾಪ್ತ ವಯಸ್ಸಿಗೆ ಬಂದು 10 ವರ್ಷ ಅಗಿರಬಹುದು. ನನ್ನ ಅಣ್ಣನ ಮಗ ಕೂಡ ಕೃಷಿ ಕೆಲಸ ಮಾಡಿಕೊಂಡು ಇದ್ದಾನೆ. ನನಗೆ ಮತ್ತು 1 ನೇ ಪ್ರತಿವಾದಿಗೆ ಸಮಾನವಾದ ಹಿಸ್ಸೆ ಬಂದಿದೆ ಎಂದರೆ ಸರಿಯಲ್ಲ, ತಮ್ಮ ಜಮೀನಿನಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಮಗ ದುಡಿದು ತೋಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾವು ಈಗಾಗಲೇ ಇರುವ ಸ್ವಾಧೀನದ ಆಧಾರದ ಮೇಲೆ ಕಂದಾಯ ಇಲಾಖೆಗಳಲ್ಲಿ ದಾಖಲೆ ಮಾಡಿಸಿ ನೋದಂಣಿ ವಿಭಾಗ ಪತ್ರ ಮಾಡಿಕೊಳ್ಳೋಣ ಎಂದು 1 ನೇ ಪ್ರತಿವಾದಿ ಹೇಳಿದರೂ ಕೂಡ ಕೇಳದೆ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. 2012 ಕ್ಕಿಂತ ಪೂರ್ವದಿಂದಲೇ ನಾನು ಮತ್ತು 1 ನೇ ಪ್ರತಿವಾದಿ ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡು ನಮ್ಮ ನಮ್ಮ ಜಮೀನುಗಳನ್ನು ಪ್ರತ್ಯೇಕವಾಗಿ ಅನುಭವಿಸಿಕೊಂಡು, ಅಭಿವೃದ್ಧಿ ಮಾಡಿಕೊಂಡಿರುವ ಕಾರಣ ಹಾಗೂ ಪ್ರತ್ಯೇಕ ವಾಸದ ಮನೆ ಕಟ್ಟಿಸಿಕೊಂಡಿರುವ ಕಾರಣ ದಾವಾ ಆಸ್ತಿಗಳಲ್ಲಿ ನನಗೆ ಪಾಲು ಕೇಳುವ ಹಕ್ಕು ಉಳಿದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**ಸಹಿ/-**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.